ದಿನಾಂಕಃ 12-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ಎದುರುದಾರರ ಪರ ವಕೀಲರಿಂದ,

1) ಹೆಚ್ ಡಿ ಎಫ್. ಸಿ ಬ್ಯಾಂಕ್ ರವರು ನೀಡಿರುವ ದೃಡೀಕೃತ ಪತ್ರವನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು ನಿಶಾನೆ.ಆರ್-09 ಎಂದು ಗುರುತಿಸಲಾಯಿತು.

2) ವಿಮಾ ವೈದ್ಯಾಧಿಕಾರಿ ಕಚೇರಿ ರವರು ನೀಡಿರುವ ವಿಮಾ ಪ್ರತಿಯನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು ನಿಶಾನೆ.ಆರ್-10 ಎಂದು ಗುರುತಿಸಲಾಯಿತು.

3) ವಿಮಾ ವೈದ್ಯಾಧಿಕಾರಿ ಕಚೇರಿ ರವರು ನೀಡಿರುವ ವಿಶೇಷ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತೇನೆ ಸದರಿ ದಾಖಲೆಯನ್ನು ನಿಶಾನೆ.ಆರ್-11 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಅರ್ಜಿದಾರರ ರವರ ಪರ ಶ್ರೀ ಡಿ ಸಿ ಜಿ ವಕೀಲರಿಂದ

1) ನಾನು ಅರ್ಜಿಯಲ್ಲಿರು ಮಾಹಿತಿಯನ್ನು ತಿಳಿದುಕೊಂಡಿರುತ್ತೇನೆ. ನನ್ನ ಲಿಖಿತ ತಕರಾರಿನಲ್ಲಿರುವ ಮಾಹಿತಿಯನ್ನು ತಿಳಿದುಕೊಂಡಿರುತ್ತೇನೆ. ಲಾರಿ ನೋಂದಣಿ ಸಂಖ್ಯೆ KA-40-A-2458 ವಾಹನ ಅಪಘಾತಕ್ಕಿಡಾಗಿತ್ತು ಎಂದರೆ ಸರಿ. ಈ ಸಂಭಂದವಾಗಿ ಪೋಲಿಸ ಠಾಣೆಯಲ್ಲಿ ಪ್ರಕರಣ ದಾಖಲು ಆಗಿರುತ್ತದೆ ಎಂದರೆ ಸರಿ. ನಾನು ಪೋಲಿಸ್ ಠಾಣೆಯಲ್ಲಿ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ರೂ. 11,935/- ಹಣವನ್ನು ಅರ್ಜಿದಾರರಿಗೆ ದಿನಾಂಕ 19.06.2021 ರಂದು ಮುಂಗಡ ಹಣವಾಗಿ ನೀಡಿರುತ್ತೇವೆ. ದಿನಾಂಕ 19.06.2021 ಅಪಘಾತ ಆಗಿರುವುದಿಲ್ಲ.

2) ನಮ್ಮ ಸೂಚನೆಯಂತೆ ಆರೋಪಿ ಸಿಮೆಂಟ್ ಕಂಬಗಳನ್ನು ಸರಬರಾಜು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಸೂಚನೆಯನ್ನು ಪಾಲಿಸದೇ ಇರುವ ಕಾರಣ ಅವರಿಗೆ ನೋಟಿಸ್ ನೀಡಿರುವುದಿಲ್ಲ. ಅದೇ ರೀತಿ ಪೋಲಿಸ್ ದೂರು

ದಾಖಲೆ ಮಾಡಿರುವುದಿಲ್ಲ. ಅಂತಿಮ ವರದಿಯನ್ನು ಪ್ರಶ್ನೇ ಮಾಡಿರುವುದಿಲ್ಲ. ಇ ಎಸ್ ಐ ಆಸ್ಪತ್ರೆಯಿಂದ ನೌಕರರಿಗೆ ಗಾಯಗೊಂಡಲ್ಲಿ ಚಿಕಿತ್ಸಾ ವ್ಯಚ್ಚವನ್ನು ನೀಡಿರುತ್ತಾರೆ ಎಂದರೆ ಸರಿ. ನಾನು ಇ ಎಸ್ ಐ ಗೆ ಪ್ರತಿ ತಿಂಗಳು ಹಣವನ್ನು ಪಾವತಿ ಮಾಡುತ್ತೇವೆ. ನಾನು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಹಣವನ್ನು ನೀಡುವುದನ್ನು ತಪ್ಪಿಸುವ ಸಲುವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಬಳಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ